# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಶರವಣ ಟಿ.ಎ.
(ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 319

ಉತ್ತರಿಸಬೇಕಾದ ದಿನಾಂಕ : 21.12.2022

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಗೋ ಹತ್ಯೆ ನಿಷೇಧದಿಂದ ರಾಜ್ಯದಲ್ಲಿ ಹೆಚ್ಚುತ್ತಿರುವ ದನಗಳ ಸಂಖ್ಯೆ ಎಷ್ಟು; ಈ ಎಲ್ಲಾ ಪಶುಗಳ ರಕ್ಷಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಭಾರತ ಸರ್ಕಾರದಿಂದ ಬಿಡುಗಡೆಯಾದ 20ನೇ ಜಾನುವಾರು ಗಣತಿ–2019ರ ಪ್ರಕಾರ ರಾಜ್ಯದಲ್ಲಿ ಒಟ್ಟು 1,14,53,564 ಜಾನುವಾರುಗಳಿವೆ. ಜಾನುವಾರು ಗಣತಿ ಪ್ರತಿ 5 ವರ್ಷಗಳಿಗೊಮ್ಮೆ ನಡೆಯುತ್ತದೆ. 2023ನೇ ಸಾಲಿನಲ್ಲಿ ನಡೆಯುವ ಜಾನುವಾರು ಗಣತಿ ನಂತರ ರಾಜ್ಯದಲ್ಲಿ ಹೆಚ್ಚುತ್ತಿರುವ ದನಗಳ ಸಂಖ್ಯೆ ವಿವರ ಲಭ್ಯವಾಗುವುದು.<br><br>2021–22 ನೇ ಸಾಲಿನಲ್ಲಿ ಪ್ರತಿ ಜಿಲ್ಲೆಗೆ ಒಂದು ಸರ್ಕಾರಿ ಗೋಶಾಲೆ ನಿರ್ಮಾಣ ಮಾಡುವ ಕಾರ್ಯ ಪ್ರಾರಂಭಿಸಲಾಗಿದೆ. ಇದರಲ್ಲಿ ಈಗಾಗಲೇ 12 ಜಿಲ್ಲೆಗಳ ಗೋಶಾಲೆಗಳಲ್ಲಿ ಜಾನುವಾರುಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.<br><br>2022–23ನೇ ಸಾಲಿನಲ್ಲಿ ಹೊಸದಾಗಿದೆ 70 ಸರ್ಕಾರಿ ಗೋಶಾಲೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಅಲ್ಲದೇ ರಾಜ್ಯದಲ್ಲಿ 219 ಖಾಸಗಿ ಪಿಂಜರಾಪೋಲ್ ಗೋಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಈ ಗೋಶಾಲೆಗಳಲ್ಲಿ ಅನಧಿಕೃತ ಸಾಗಾಣಿಕೆ ಸಮಯದಲ್ಲಿ ವಶಪಡಿಸಿಕೊಂಡ, ಮಾನ್ಯ ನ್ಯಾಯಾಲಯದಿಂದ ಕಳುಹಿಸುವ ಜಾನುವಾರುಗಳು ಹಾಗೂ ರೈತರ ಅಶಕ್ತ, ಸಾಕಲಾಗದ ಜಾನುವಾರುಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ಈ ಗೋಶಾಲೆಗಳಿಗೆ ವಂಟನದ ಲಭ್ಯತೆಗೆ ಅನುಗುಣವಾಗಿ ಸರ್ಕಾರದಿಂದ ಪ್ರತಿ ವರ್ಷ ಅನುದಾನ ನೀಡಲಾಗುತ್ತಿದೆ. ಗೋಶಾಲೆಗಳಲ್ಲಿರುವ ಜಾನುವಾರುಗಳ ರಕ್ಷಣೆಗಾಗಿ ಪುಣ್ಯ ಕೋಟಿ ದತ್ತು ಯೋಜನೆ ಪ್ರಾರಂಭಿಸಲಾಗಿದೆ. ಈ ಯೋಜನೆ ಅಡಿಯಲ್ಲಿ ಇಲ್ಲಿಯವರೆಗೆ ರೂ.22.10 ಲಕ್ಷ ಅನುದಾನದಲ್ಲಿ 206 ಜಾನುವಾರುಗಳನ್ನು 1 ವರ್ಷಕ್ಕೆ ದತ್ತು ಪಡೆಯಲಾಗಿದೆ.<br><br>2022–23ನೇ ಸಾಲಿನಲ್ಲಿ ಖಾಸಗಿ ಪಿಂಜರಾಪೋಲ್ ಗೋಶಾಲೆಗಳಲ್ಲಿರುವ ಜಾನುವಾರುಗಳ ನಿರ್ವಹಣೆಗೆ ರೂ.375.00 ಲಕ್ಷ ಅನುದಾನ ನೀಡಲಾಗಿದೆ. |
| ಆ | ಗೋಶಾಲೆಗಳಲ್ಲಿ ಈ ಸಾಲಿನಲ್ಲಿ ಸೇರ್ಪಡೆಯಾಗಿರುವ ದನಗಳ ಸಂಖ್ಯೆ ಎಷ್ಟು; | ಸರ್ಕಾರದ 12 ಹಾಗೂ 219 ಖಾಸಗಿ ಪಿಂಜರಾಪೋಲ್ ಗೋಶಾಲೆಗಳಲ್ಲಿ ಸುಮಾರು 38,450 ಜಾನುವಾರುಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. |

| | | |
|---|---|---|
| ಇ | ರೈತರ ಬಳಿ ರಕ್ಷಣೆ ಪಡೆದಿರುವ ಸಹಸ್ರಾರು ಗೊಡ್ಡು ಹಸುಗಳ ಪಾಲನೆ ಮಾಡುವ ಜವಾಬ್ದಾರಿ ರೈತನ ಮೇಲಿದ್ದು, ಇಂಥ ರೈತರಿಗೆ ನೆರವಾಗಲು ಸರ್ಕಾರ ಯೋಜನೆಯೊಂದನ್ನು ರೂಪಿಸಲು ಉದ್ದೇಶಿಸಿದೆಯೇ? (ಕಾರಣ ಮತ್ತು ವಿವರ ನೀಡುವುದು. | ರೈತರು ಸಾಕಲಾಗದ ಗೊಡ್ಡು ಹಸುಗಳನ್ನು ತಮ್ಮ ಹತ್ತಿರದ ಸರ್ಕಾರಿ ಹಾಗೂ ಖಾಸಗಿ ಪಿಂಜರಾಪೋಲ್ ಗೋಶಾಲೆಗಳಿಗೆ ತಂದು ಬಿಡಬಹುದಾಗಿದೆ. ರೈತರ ಬಳಿ ಇರುವ ಗೊಡ್ಡು ರಾಸುಗಳ ಪಾಲನೆಗಾಗಿ ಯಾವುದೇ ಯೋಜನೆ ರೂಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

**ಇ–ಪಸಂಮೀ 280 ಸಲೆವಿ 2022**

**ಪ್ರಭು ಬಿ. ಚವ್ಹಾಣ್**
**ಪಶುಸಂಗೋಪನೆ ಸಚಿವರು**